ನಗರಜೀವನ ಉಸಿರುಗಟ್ಟಿಸುವಂತಿದೆ. ಮನೆಯಿಂದ ಹೊರಬಿದ್ದರೆ ಒತ್ತಡ ಶುರುವಾಗುತ್ತದೆ. ಮನಸ್ಸು ಮತ್ತು ದೇಹ ಎರಡೂ ಈ ಒತ್ತಡಗಳನ್ನು ತಾಳಿಕೊಂಡೇ ಕೆಲಸ ಮಾಡಬೇಕು. ಹಾಗಾಗಿ ಇವತ್ತು ಮನೆ ಎಂದರೆ ಎಲ್ಲರಿಗೂ ಸ್ವರ್ಗ. ಮನೆ ಎಷ್ಟೇ ಸಣ್ಣದಿರಲಿ, ದೊಡ್ಡದಿರಲಿ ಅಲ್ಲೊಂದು ಶಾಂತಿ ನೆಮ್ಮದಿ ನೀಡುವ 'ಖಾಸಗಿ ವಲಯ' ಇದ್ದೇ ಇರುತ್ತದೆ ಅಥವಾ ಅಂತಹದ್ದೊಂದು ನೆಮ್ಮದಿಯ ಅಂತರವನ್ನು ಸೃಷ್ಟಿಸುವುದು ಎಲ್ಲರ ಗುರಿಯೂ ಆಗಿದೆ. ಹಾಗೆಂದೇ ಮನೆ ಕಟ್ಟಿಸುವಾಗ ಬಹುತೇಕ ಜನರು ಒಳಾಂಗಣ ವಿನ್ಯಾಸದ ಕಡೆಗೆ ಹೆಚ್ಚು ಗಮನ ಹರಿಸುತ್ತಿದ್ದಾರೆ. ಒಳಾಂಗಣ ವಿನ್ಯಾಸವೆಂದರೆ ಎಲ್ಲರಿಗೂ ಒಂದೇ ತೆರನಾಗಿ ಇರಬೇಕೆಂದಿಲ್ಲ. ಪ್ರತಿಯೊಬ್ಬರ ನಿಲುವು, ಅಭಿರುಚಿಗೆ ತಕ್ಕಂತೆ ಅದರಲ್ಲೂ ಸಾವಿರಾರು ವೈವಿಧ್ಯಗಳಿವೆ.

ಒಳಾಂಗಣ ವಿನ್ಯಾಸ ಕ್ಷೇತ್ರದಲ್ಲಿ ಇತ್ತೀಚೆಗೆ ಹೊಸ ಹೊಸ ಪ್ರಯೋಗಗಳಾಗುತ್ತಿವೆ. ಒಂದೆಡೆ ಸರಳ, ಅತ್ಯಂತ ಕಡಿಮೆ ವೆಚ್ಚದ ನೈಸರ್ಗಿಕ ವಿನ್ಯಾಸ ಜನಪ್ರಿಯಗೊಳ್ಳುತ್ತಿದ್ದರೆ, ಇನ್ನೊಂದೆಡೆ ಕಡಿಮೆ ಸ್ಥಳದಲ್ಲೇ, ಕಡಿಮೆ ಪರಿಕರಗಳನ್ನೇ ಬಳಸಿ ಐಶಾರಾಮಿ ಪರಿಸರ ನಿರ್ಮಿಸುವ ಕಲೆಗಾರಿಕೆ ಬೆಳೆಯುತ್ತಿದೆ. ದೊಡ್ಡ ಮನೆ ಇದ್ದವರು ಬೇಕಾದಂತೆ ಐಶಾರಾಮಿ ಪರಿಕರಗಳನ್ನು ಬಳಸಿ ಮನೆಯೊಳಗೆ ಅರಮನೆಗಳನ್ನೇ ಕಟ್ಟಿಸಿಕೊಳ್ಳಬಹುದು ಎಂದು ಈಗ ಯಾರೂ ಹತಾಶರಾಗಬೇಕಿಲ್ಲ. ಇರುವ ಸ್ಥಳವನ್ನೇ ದುಪ್ಪಟ್ಟುಗೊಳಿಸುವ, ಇಲ್ಲದಿರುವುದೆಲ್ಲ ಇದೆ ಎಂಬ ಭ್ರಮಾಲೋಕ ಸೃಷ್ಟಿಸುವ ಕಲೆಗಾರಿಕೆಯೂ ಈಗ ಒಳಾಂಗಣ ವಿನ್ಯಾಸದಲ್ಲಿ ಪ್ರಮುಖ ಸ್ಥಾನ ಪಡೆದುಕೊಳ್ಳುತ್ತಿದೆ.

ಅದಾಗತಾನೇ ಟಿ.ವಿ ಕಾಲಿಟ್ಟ ದಿನಗಳಲ್ಲಿ ರವಿ ಚೋಪ್ರಾ ಅವರ 'ಮಹಾಭಾರತ' ಧಾರಾವಾಹಿಯಲ್ಲಿ ಮೂಡಿಬಂದಿದ್ದ ಆ ದೃಶ್ಯ ಇಂದಿಗೂ ನಮ್ಮ ಕಣ್ಣಿಗೆ ಕಟ್ಟಿದಂತಿದೆ. ಇಂದ್ರಪ್ರಸ್ಥ ಅರಮನೆಯಿಂದ ಹೊರಬರಲಾಗದೆ ಒದ್ದಾಡುವ ದುರ್ಯೋಧನ, ಹೊರಹೋಗುವ ದ್ವಾರ ಎಂದು ಭ್ರಮಿಸಿ ಗೋಡೆಗೆ ಡಿಕ್ಕಿ ಹೊಡೆಯುವುದು, ನೆಲಹಾಸು ಎಂದು ಭ್ರಮಿಸಿ ನೀರಿನ ಹೊಂಡದಲ್ಲಿ ಬೀಳುವುದು, ಎಲ್ಲಿ ಏನಿದೆ ಎಂಬುದರ ಗುಟ್ಟು ಬಿಟ್ಟುಕೊಡದ ಅರಮನೆ ಒಳಾಂಗಣ ವಿನ್ಯಾಸ ಕಂಡು ಅವಾಕ್ಕಾಗುವುದು..! ಹೌದು, ಆತನ ಒದ್ದಾಟ ಕಂಡು ಟಿ.ವಿ ಯಲ್ಲಿನ ದ್ರೌಪದಿಯೊಂದಿಗೆ ಅದರ ಮುಂದೆ ಕುಳಿತವರೂ ನಕ್ಕಿದ್ದೇ ನಕ್ಕಿದ್ದು. ದೇವಲೋಕದ ವಾಸ್ತುಶಿಲ್ಪಿಯಾದ ವಿಶ್ವಕರ್ಮನೇ ಆ ಅರಮನೆಯನ್ನೂ ರೂಪಿಸಿದ್ದನಂತೆ!

ಮಹಾಭಾರತದ ಈ ರಸಪ್ರಸಂಗ ಈಗ ನೆನಪಾಗಲಿಕ್ಕೆ ಕಾರಣವಿದೆ. ಬನ್ನೇರುಘಟ್ಟ ರಸ್ತೆಯ ಬಿ.ಎಂ.ಉಮರ್ ಹಾಜಿಯವರ ಮನೆಗೆ ಬಂದವರು ಇಂತಹದ್ದೇ ಭ್ರಮೆಗೆ ಒಳಗಾಗಿ ಗೋಡೆಗೆ ತಲೆ ಚಚ್ಚಿಕೊಂಡ ಉದಾಹರಣೆಗಳು ಬೇಕಾದಷ್ಟಿವೆ. ಮನೆಗೆ ಬಂದ ಅತಿಥಿಗಳು ಪೆಟ್ಟು ಮಾಡಿಕೊಳ್ಳದಂತೆ ನೋಡಿಕೊಳ್ಳುವ ಹೊಣೆ ಹೊತ್ತಿರುವ ಉಮರ್ ಅವರ ಪತ್ನಿ, ಬಂದ ಅತಿಥಿಗಳಿಗೆ ವಾಡಿಕೆಯಂತೆ 'ಹೇಗಿದ್ದೀರಿ' ಎಂದು ಕೇಳುವ ಬದಲು 'ಅದು ಹಜಾರ ಅಲ್ಲ; ಗೋಡೆ ಹುಷಾರು' ಎಂದು ಹೇಳುತ್ತಿದ್ದಾರೆ! ಹೌದು, ಟಿ.ವಿಯಲ್ಲಿ ಕಾಣಸಿಕ್ಕಿದ್ದ ಆ ಭ್ರಮಾಲೋಕ, ಒಳಾಂಗಣ ವಿನ್ಯಾಸ ತಂತ್ರಜ್ಞರ ಸೃಜನಶೀಲ ಕೌಶಲದಲ್ಲಿ ವಾಸ್ತವಕ್ಕಿಳಿದಿದೆ. ಹೊಸ ಮನೆ ಕಟ್ಟಿಸುವವರು ತುಸು ಹೆಚ್ಚಿನ ಖರ್ಚು ಮಾಡಿದರೆ ತಮ್ಮ ಮನೆಯಲ್ಲೂ ಅಂತಹ ಮಾಯಾಲೋಕವನ್ನು ಸೃಷ್ಟಿಸಿಕೊಳ್ಳಬಹುದು.



ಬಿ.ಎಂ.ಉಮರ್ ಹಾಜಿ

ಜೇನ್ನೊಣಗಳು, ಇರುವೆ ಗೆದ್ದಲು ಹುಳುಗಳು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಮನೆ ಕಟ್ಟುತ್ತವೆ. ಒಳಾಂಗಣ ವಿನ್ಯಾಸವೂ ಅವುಗಳಿಗೆ ಹಿತಕರ ಆಗುವಂತೆ ಇರುತ್ತದೆ. ಜೇನ್ನೊಣಗಳ ಗೂಡಿನಲ್ಲಂತೂ ಅದೆಷ್ಟೊಂದು ಕಂಪಾರ್ಟ್‌ಮೆಂಟ್‌ಗಳು ರಚನೆ ಆಗಿರುತ್ತವೆ. ಕುಶಲ ದರ್ಜಿಯಂತೆ ನಾರು ಹೆಣೆಯುತ್ತಾ ಸೊಬಗಿನ ಗೂಡು ಕಟ್ಟುತ್ತದೆ ಪುಟ್ಟ ಹಕ್ಕಿ. ಹಣಕಾಸು ಕಂಪೆನಿಯೊಂದು ಮನೆ ಸಾಲದ ಜಾಹೀರಾತಿಗೆ ಹಕ್ಕಿಯೊಂದು ಗೂಡು ಕಟ್ಟುತ್ತಿರುವ ಚಿತ್ರವನ್ನೇ ಬಳಸಿಕೊಂಡಿದೆ. ಅಲ್ಲವೆ ಮತ್ತೆ, ಮನುಷ್ಯರು ನಿರ್ಮಿಸುವ ಮನೆ ಎಂದರೇನು ಸಾಮಾನ್ಯವೆ?

ಸೃಜನಶೀಲ ಕೌಶಲದ ಮೂಸೆಯಿಂದ ಅರಳಿದ ಮನೆಯ ಒಳಾಂಗಣ ವಿನ್ಯಾಸದ್ದೇ ಒಂದು ಹೊಸ ಜಗತ್ತು. ಗೋಡೆಗೆ ಇಂತಹದ್ದೇ ಮಾರ್ಬಲ್‌ಗಳು ಬೇಕು ಎಂದು ರಾಜಸ್ತಾನದ ಮಕ್ರಾನಾ, ಜೈಪುರ ಮತ್ತಿತರ ಪ್ರದೇಶಗಳಿಗೆ ಸುತ್ತಿದವರು ನಮ್ಮ ನಡುವಿದ್ದಾರೆ. ನುರಿತ ಕಲಾವಿದರನ್ನು ಕರೆಸಿ ಸೀಲಿಂಗ್‌ಗೂ ಕುಸುರಿ ಇಳಿಸುವ ಕಲಾಪ್ರಿಯರು ಇದ್ದಾರೆ. ಶತಮಾನಗಳ ಹಿಂದೆ ಬರಿ ಕಟ್ಟಿಗೆಯಲ್ಲೇ ಒಳಾಂಗಣ ವಿನ್ಯಾಸ ಮಾಡಿದ್ದಕ್ಕೆ ಉದಾಹರಣೆಯಾಗಿ ಕೇರಳದ ಪದ್ಮನಾಭಪುರ ಕಟ್ಟಿಗೆ ಅರಮನೆಯಿದೆ. ಮನೆ ಕಟ್ಟುವಾಗ ಒಳಾಂಗಣ ವಿನ್ಯಾಸ ಹೀಗೇ ಇರಬೇಕು ಎನ್ನುವ ತುಡಿತ ಹಿಂದಿನ ರಾಜ ಮಹಾರಾಜರಿಂದ ಇಂದಿನ ಶ್ರೀಸಾಮಾನ್ಯನವರೆಗೆ ಎಲ್ಲರಿಗೂ ಇದ್ದದ್ದೇ.

### ಉಮರ್ ಮನೆಗೆ ಹೀಗೆ ಬನ್ನಿ...

ಉಮರ್ ಅವರ ಮನೆಯನ್ನು ನೋಡಲು ಹೈದರಾಬಾದ್, ಚೆನ್ನೈ, ಮುಂಬೈ, ಕೊಚ್ಚಿ, ಕೋಲ್ಕತ್ತಗಳಲ್ಲದೆ ಗಲ್ಫ್ ದೇಶಗಳ ನಗರಗಳಿಂದಲೂ ಜನ ಬರುತ್ತಿದ್ದಾರೆ. ಮರಳಿ ಹೋಗುವಾಗ 'ನಮ್ಮ ಮನೆಗೂ ಇಂತಹ ಒಳಾಂಗಣ ವಿನ್ಯಾಸ ಬೇಕು' ಎಂಬ ಆರ್ಡರ್ ನೀಡಿಯೇ ಹೋಗುತ್ತಿದ್ದಾರೆ.

ಇಲ್ಲದ್ದನ್ನು ಇದ್ದಂತೆ, ಕೃತಕವಾದುದನ್ನು ನೈಜತೆಯಂತೆ ತೋರಿಸುತ್ತದೆ ಈ ನವೀನ ವಿನ್ಯಾಸ. ಉಮರ್ ಅವರ ಮನೆಯ ಕಾಂಪೌಂಡ್ ಒಳ ಹೊಕ್ಕೊಡನೆ ಪುಟ್ಟ ಜಲಪಾತವೊಂದು ನಮ್ಮನ್ನು ಎದುರುಗೊಳ್ಳುತ್ತದೆ. ಥೇಟ್ ಕಾಡಿನಲ್ಲಿ ಸಿಗುವ ಪುಟ್ಟ ಜಲಪಾತದಂತೆ ಅದು ಧುಮ್ಮಿಕ್ಕುತ್ತದೆ. ಅದರ ಪಕ್ಕದಲ್ಲೇ ಬಾಳೆ ಕಂಬದ ಮೇಲೆ ಗ್ಲೋಬ್ ಇಟ್ಟಿದ್ದಾರೆ. 'ನೀರು ಬಿದ್ದು ಆ ಬಾಳೆಕಂಬ ಕೊಳೆಯುವುದಿಲ್ಲವೆ' ಎಂದು ಕೇಳಿದರೆ, 'ಅದನ್ನೊಮ್ಮೆ ಮುಟ್ಟಿ ನೋಡಿ' ಎಂದು ಉತ್ತರಿಸುತ್ತಾರೆ ಉಮರ್. ಮುಟ್ಟಿ ನೋಡಿದಾಗ ಮಾತ್ರ ಗೊತ್ತಾಗುತ್ತದೆ ಅದು ಸಿಮೆಂಟ್ ಬಾಳೆಕಂಬ ಎಂದು!

ಮನೆಯ ಪಡಸಾಲೆ ಹೊಕ್ಕೊಡನೆ ಸಾಲು ಕಂಬಗಳ ಹಜಾರ ಎದುರುಗೊಳ್ಳುತ್ತದೆ. ಆ ಹಜಾರ ಸುತ್ತಿ ಬರೋಣ ಎಂಬ ಆಸೆಯಿಂದ ನೀವೇನಾದರೂ ಬಿರುಸಿನಿಂದ ಹೆಜ್ಜೆ ಹಾಕಿ ಗೋಡೆಗೆ ತಲೆ ಚಚ್ಚಿಕೊಳ್ಳದಿದ್ದರೆ ನಿಮ್ಮ ಪುಣ್ಯ. '3ಡಿ' ಡಿಜಿಟಲ್ ಬಣ್ಣದಲ್ಲಿ ಗೋಡೆ ಮೇಲೆ ಸೃಷ್ಟಿಯಾದ ಹಜಾರ ಅದು. ಹೊರಗಿನಿಂದ ಬಂದವರಿಗೆ ನೈಜ ಹಜಾರದ ಭ್ರಮೆ ಹುಟ್ಟಿಸುತ್ತದೆ. ಮೆಟ್ಟಿಲು ಹತ್ತಿ ಮೇಲೆ ಹೋಗುವಾಗ ಎದುರಿಗೆ ಕಾಣುವ ಕನ್ನಡಿಯಲ್ಲಿ ಮನೆಯ ಬಿಂಬವೇ ಗೋಚರಿಸುತ್ತದೆ.